**All India Radio: Bangalore**
**National Bulletin In Kannada**
**13.04.2025 13.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ, ಸಂವಿಧಾನ ೭೫ ವರ್ಷ ಪೂರೈಸಿದ ಹಿನ್ನೆಲೆ; ದೇಶಾದ್ಯಂತ 'ಜೈ ಭೀಮ್' ಪಾದಯಾತ್ರೆ

೨. ನವದೆಹಲಿಯಲ್ಲಿಂದು ವೈಬ್ರೆಂಟ್ ಬಿಲ್ಡ್‌ಕಾನ್-೨೦೨೫ ಕ್ಕೆ ಕೇಂದ್ರ ಸಚಿವ ಪಿಯೂಷ್ ಗೋಯಲ್ ಚಾಲನೆ

೩. ಜಲಿಯನ್ ವಾಲಾ ಬಾಗ್ ಹತ್ಯಾಕಾಂಡ; ಹುತಾತ್ಮರಿಗೆ ಪ್ರಧಾನಿ ಗೌರವ ನಮನ

೪. ಐಪಿಎಲ್ ಟಿ-೨೦ ಕ್ರಿಕೆಟ್; ಇಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು - ರಾಜಸ್ಥಾನ ರಾಯಲ್ಸ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ - ಮುಂಬೈ ಇಂಡಿಯನ್ಸ್ ಮುಖಾಮುಖಿ

*****************

ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮ ಜಯಂತಿ ಹಾಗೂ ಭಾರತ ಸಂವಿಧಾನಕ್ಕೆ ೭೫ ವರ್ಷಗಳು ಸಂದುವ ಹಿನ್ನೆಲೆಯಲ್ಲಿ 'ಜೈ ಭೀಮ್' ಪಾದಯಾತ್ರೆಯನ್ನು ಆಯೋಜಿಸಲಾಗಿದೆ. ದೇಶಾದ್ಯಂತ ಸುಮಾರು ೫ ಸಾವಿರ ಸ್ಥಳಗಳಲ್ಲಿ ಈ ಯಾತ್ರೆಯನ್ನು ಆಯೋಜಿಸಲಾಗಿದೆ.

ಬಿಹಾರದ ಪಾಟ್ನಾದ ಐತಿಹಾಸಿಕ ಗಾಂಧಿ ಮೈದಾನದಲ್ಲಿ ಸಚಿವಾಲಯವು ಆಯೋಜಿಸಿದ್ದ ಜೈ ಭೀಮ್ ಯಾತ್ರೆಗೆ ಚಾಲನೆ ನೀಡುವ ಮೊದಲು ಅಲ್ಲಿ ನೆರೆದಿದ್ದ ಯುವಜನತೆ ಮತ್ತು 'ಮೈ ಭಾರತ್' ಸ್ವಯಂಸೇವಕರನ್ನು ಉದ್ದೇಶಿಸಿ ಮಾತನಾಡಿದ ಕೇಂದ್ರ ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ.ಮನ್ಸುಖ್ ಮಾಂಡವಿಯ, ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣಕ್ಕಾಗಿ ಡಾ.ಭೀಮ್ ರಾವ್ ಅಂಬೇಡ್ಕರ್ ಅವರ ಸಮಾನತೆ, ನ್ಯಾಯ ಮತ್ತು ಭ್ರಾತೃತ್ವ ದೃಷ್ಟಿಕೋನವನ್ನು ಯುವಜನತೆ ಅಳವಡಿಸಿಕೊಳ್ಳುವಂತೆ ಕರೆ ನೀಡಿದ್ದಾರೆ.

ದೇಶದ ಯುವಜನರು ಭಾರತ ಸಂವಿಧಾನದ ತತ್ತ್ವಗಳನ್ನು ಗೌರವಿಸುವುದರ ಜೊತೆಗೆ ಅವುಗಳನ್ನು ಅನುಸರಿಸಬೇಕು. ಪ್ರಧಾನಿ ಮೋದಿಯವರು ಸುಮಾರು ೧ ಲಕ್ಷದಷ್ಟು ಯುವ ನಾಯಕರು ಸದಾಸನ್ನದ್ದರಾಗಬೇಕು ಅದಕ್ಕಾಗಿ ಮೈ ಭಾರತ ಎಂಬ ಅಭಿಯಾನವನ್ನು ಆರಂಭಿಸಲಾಗಿದೆ ಎಂದು ಮಾಂಡವಿಯ ತಿಳಿಸಿದರು. ಈಗಾಗಲೇ ೧.೭೫ ಕೋಟಿ ಯುವಜನರು ಮೈ ಭಾರತ್ ಅಭಿಯಾನದಲ್ಲಿ ಕೈ ಜೋಡಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಪ್ರಯುಕ್ತ ದೆಹಲಿ ಸರ್ಕಾರ ಇಂದು ಜಾಥಾ ಆಯೋಜಿಸಿತ್ತು. ಸಾವಿರಾರು ಮಕ್ಕಳು ಪಾಲ್ಗೊಂಡಿದ್ದ ಜಾಥಾಕ್ಕೆ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಹಸಿರು ನಿಶಾನೆ ತೋರಿದರು.

ಈ ವೇಳೆ ಮಾತನಾಡಿದ ಅವರು, ಬಾಬಾ ಸಾಹೇಬ್ ಅಂಬೇಡ್ಕರ್ ಅವರು, ಸ್ಥಾಪಿಸಿದ ಮಾರ್ಗವನ್ನು ಅನುಸರಿಸಲು, ಅವರು ರೂಪಿಸಿರುವ ತತ್ವಗಳನ್ನು ಎತ್ತಿ ಹಿಡಿಯಲು ಮತ್ತು ಜನರಿಗೆ ಸೂಕ್ತವಾದ ಶಿಕ್ಷಣ, ಆರೋಗ್ಯ ರಕ್ಷಣೆ ಮತ್ತು ಸಮಾನತೆ ಖಚಿತಪಡಿಸಲು ದೆಹಲಿ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು. ಪ್ರತಿಯೊಂದು ಮಗು ಅಂಬೇಡ್ಕರ್ ಅವರ ಬಗ್ಗೆ ತಿಳಿದು ಅವರ ಸ್ಮರಣೆಯನ್ನು ಗೌರವಿಸುವ ಕಾರ್ಯಕ್ರಮವನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದೆ ಎಂದು ಅವರು ತಿಳಿಸಿದರು.

*****************

ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ನಾಳೆ ಪ್ರಧಾನಿ ನರೇಂದ್ರ ಮೋದಿ ಹರಿಯಾಣಕ್ಕೆ ಭೇಟಿ ನೀಡಲಿದ್ದಾರೆ.

ನಾಳೆ ಬೆಳಿಗ್ಗೆ ಹಿಸಾರ್‌ಗೆ ಪ್ರಯಾಣ ಬೆಳೆಸಿ ಅಲ್ಲಿ, ಹಿಸಾರ್‌ನಿಂದ ಅಯೋಧ್ಯೆಗೆ ಸಂಪರ್ಕ ಒದಗಿಸುವ ವಾಣಿಜ್ಯ ವಿಮಾನಕ್ಕೆ ಚಾಲನೆ ನೀಡಲಿದ್ದಾರೆ. ಇದರ ಜೊತೆಗೆ ಅವರು, ಹಿಸಾರ್ ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಬಳಿಕ ಪ್ರಧಾನಿ, ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ.

ಭೇಟಿಯ ಭಾಗವಾಗಿ ಪ್ರಧಾನಿ ಯಮುನಾನಗರದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಆ ಪ್ರದೇಶದ ವಿದ್ಯುತ್ ಮೂಲಸೌಕರ್ಯ ಉತ್ತೇಜಿಸುವ ಸಲುವಾಗಿ, ಪ್ರಧಾನಿ, ಯಮುನಾನಗರದಲ್ಲಿ ದೀನಬಂಧು ಛೋಟು ರಾಮ್ ಉಷ್ಣ ವಿದ್ಯುತ್ ಸ್ಥಾವರದ ೮೦೦ ಮೆಗಾವ್ಯಾಟ್ ಆಧುನಿಕ ಉಷ್ಣ ವಿದ್ಯುತ್ ಘಟಕಕ್ಕೆ ಶಿಲಾನ್ಯಾಸ ನೆರವೇರಿಸಲಿದ್ದಾರೆ. ೨೩೩ ಎಕರೆಗಳಲ್ಲಿ ವ್ಯಾಪಿಸಿರುವ, ಸುಮಾರು ೮ ಸಾವಿರದ ೪೭೦ ಕೋಟಿ ರೂಪಾಯಿ ಮೌಲ್ಯದ ಈ ಘಟಕ, ಹರಿಯಾಣದ ಇಂಧನ ಸ್ವಾವಲಂಬನೆಯನ್ನು ಗಮನಾರ್ಹವಾಗಿ ಹೆಚ್ಚಿಸಲಿದೆ ಮತ್ತು ರಾಜ್ಯಾದ್ಯಂತ ನಿರಂತರ ವಿದ್ಯುತ್ ಪೂರೈಕೆಯನ್ನು ಖಚಿತಪಡಿಸಲಿದೆ.

ಕೇಂದ್ರ ಸರ್ಕಾರದ ಗೋಬರ್ಧನ್ ಯೋಜನೆಯ ಭಾಗವಾಗಿ ಪ್ರಧಾನಮಂತ್ರಿಗಳು  ಯಮುನಾನಗರದ ಮುಕರಬ್‌ಪುರದಲ್ಲಿ ಜೈವಿಕ ಅನಿಲ ಸ್ಥಾವರಕ್ಕೆ ಶಿಲಾನ್ಯಾಸ ನೆರವೇರಿಸಲಿದ್ದಾರೆ. ಭಾರತ್ ಮಾಲಾ ಪರಿಯೋಜನೆಯಡಿಯಲ್ಲಿ ಸುಮಾರು ೧ ಸಾವಿರದ ೭೦ ಕೋಟಿ ರೂಪಾಯಿ ಮೌಲ್ಯದ ೧೪.೪ ಕಿಲೋಮೀಟರ್ ರೇವಾರಿ ಬೈಪಾಸ್ ಯೋಜನೆಯನ್ನು ಪ್ರಧಾನಿ ಉದ್ಘಾಟಿಸಲಿದ್ದಾರೆ.

ಇದು ರೇವಾರಿ ನಗರದ ಜನದಟ್ಟಣೆ ಸಮಸ್ಯೆಗೆ ಪರಿಹಾರ ಒದಗಿಸಲಿದ್ದು,  ದೆಹಲಿ-ನಾರ್ನಾಲ್ ಪ್ರಯಾಣದ ಸಮಯವನ್ನು ಸುಮಾರು ಒಂದು ಗಂಟೆ ಕಡಿಮೆ ಮಾಡುತ್ತದೆ. ಆ ಮೂಲಕ ಈ ಪ್ರದೇಶದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಯನ್ನು ಹೆಚ್ಚಿಸಲಿದೆ.

******************

ನವದೆಹಲಿಯ ಯಶೋಭೂಮಿ ಸಮುದಾಯ ಭವನದಲ್ಲಿ ದೇಶದ ಅತಿ ದೊಡ್ಡ ಕಟ್ಟಡ ಸಾಮಾಗ್ರಿ ಮತ್ತು ನಿರ್ಮಾಣ ಪ್ರದರ್ಶನ ವೈಬ್ರೆಂಟ್ ಬಿಲ್ಡ್‌ಕಾನ್-೨೦೨೫ಕ್ಕೆ ಇಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಚಾಲನೆ ನೀಡಲಿದ್ದಾರೆ.

ಸುಮಾರು ೨೭ ಸಾವಿರ ಚದರ ಮೀಟರ್ ವಿಸ್ತೀರಣದಲ್ಲಿ ವ್ಯಾಪಿಸಿರುವ ಪ್ರದರ್ಶನದಲ್ಲಿ ೨೫೦ ಕ್ಕೂ ಹೆಚ್ಚು ಪ್ರದರ್ಶಕರು, ೭೦೦ ಕ್ಕೂ ಹೆಚ್ಚು ಜಾಗತಿಕ ಖರೀದಿದಾರರು ಮತ್ತು ೫೦ ಸಾವಿರಕ್ಕೂ ಹೆಚ್ಚು ಸ್ಥಳೀಯ ಸಂದರ್ಶಕರು ಭಾಗವಹಿಸಲಿದ್ದಾರೆ.

ಈ ಕಾರ್ಯಕ್ರಮ, ಅಮೆರಿಕ, ಮೆಕ್ಸಿಕೊ, ಬ್ರೆಜಿಲ್, ಬ್ರಿಟನ್, ಸ್ಪೇನ್, ಯುಎಇ ಸೇರಿದಂತೆ ೬೦ ಕ್ಕೂ ದೇಶಗಳ ಖರೀದಿದಾರರನ್ನು ಒಟ್ಟುಗೂಡಿಸಲಿದೆ.

******************

ಇಂದು ವೈಶಾಖ ಮಾಸದ ಪ್ರಥಮ ದಿನ. ದೇಶದ ವಿವಿಧ ಭಾಗಗಳಲ್ಲಿ ಸುಗ್ಗಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಪಂಜಾಬ್‌ನಲ್ಲಿ ಬೈಸಾಖಿ ಎಂದು ಆಚರಿಸಲಾಗುವ ಸುಗ್ಗಿ ಹಬ್ಬಕ್ಕೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸವಿದೆ.

ಸಿಖ್‌ರ ೧೦ ನೇ ಗುರು ಗುರು ಗೋವಿಂದ್ ಸಿಂಗ್ ಅವರು ಖಾಲ್ಸಾ ಪಂಥವನ್ನು ಆರಂಭಿಸಿದ ಶುಭದಿನ ಇದಾಗಿದೆ. ಈ ನಿಮಿತ್ತ ಅಮೃತಸರದ ಗುರುದ್ವಾರದಲ್ಲಿ ಇಂದು ಬೆಳಿಗ್ಗಿನಿಂದಲೇ ದೇಶದ ವಿವಿಧೆಡೆ ಮತ್ತು ವಿದೇಶಗಳಿಂದ ಆಗಮಿಸಿದ ಸಿಖ್ ಬಂಧುಗಳು ವಿಶೇಷ ಪೂಜೆ ಮತ್ತು ಗುರುಬಾಣಿ ಪಠಣದಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಕೇರಳದಲ್ಲಿ ನವವರ್ಷ ವಿಷು ಸಂಭ್ರಮ ಕಳೆಕಟ್ಟಿದೆ. ಪಶ್ಚಿಮ ಬಂಗಾಳದಲ್ಲಿ ಪೊಹಿಲಾ ಬೊಯಿಸಾಖ್, ತಮಿಳುನಾಡಿನಲ್ಲಿ ಪುತತುಮಡು ಪಿರಾಪು, ಅಸ್ಸಾಂನಲ್ಲಿ ಬೊಹಾಲಿ ಬಿಹು ಅಥವಾ ರೊಂಗಾಲಿ ಬಿಹು ಹೀಗೆ ವಿವಿಧ ರಾಜ್ಯಗಳಲ್ಲಿ ವಿವಿಧ ಹೆಸರುಗಳಿಂದ ಸುಗ್ಗಿ ಹಬ್ಬವನ್ನು ಆಚರಿಸಲಾಗುತ್ತಿದೆ. ನಾಡಿನ ಸಮಸ್ತ ಜನತೆಗೆ ಶುಭ ಹಾರೈಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಈ ಹಬ್ಬಗಳು ರಾಷ್ಟ್ರದ ಅಭಿವೃದ್ಧಿ ಕಡೆಗೆ ಬದ್ಧತೆ ಮತ್ತು ಸಮರ್ಪಣಾ ಭಾವದೊಂದಿಗೆ ಕೆಲಸ ಮಾಡಲು ಜನರಲ್ಲಿ ಪ್ರೇರಣೆ ತುಂಬಲಿ ಎಂದು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಜನತೆಗೆ ಬೈಸಾಕಿ ಹಬ್ಬದ ಶುಭಾಶಯ ಕೋರಿದ್ದು, ಈ ಹಬ್ಬ ಎಲ್ಲರ ಬದುಕಿನಲ್ಲಿ ಹೊಸ ಭರವಸೆ, ಸಂತೋಷ ಮತ್ತು ಸಮೃದ್ಧಿಯನ್ನು ತರಲಿ ಎಂದ ಹಾರೈಸಿದ್ದಾರೆ.

******************

ಹಿಂದೂ ಮಹಾಸಾಗರ ಹಡಗು- ಐಒಎಸ್ ಸಾಗರ್ ಎಂದು ನಿಯೋಜಿಸಲ್ಪಟ್ಟಿರುವ ಐಎನ್‌ಎಸ್ ಸುನೈನಾ ನಿನ್ನೆ ಟಾಂಜೇನಿಯಾದ ದಾರ್-ಎಸ್- ಸಲಾಮ್ ಬಂದರಿಗೆ ತಲುಪಿದೆ. ಈ ತಿಂಗಳ ೫ ರಂದು ಕಾರವಾರದಿಂದ ಹೊರಟ ಈ ನೌಕೆ ಹಿಂದೂ ಮಹಾಸಾಗರ ಪ್ರದೇಶದ ೯ ಮಿತ್ರ ರಾಷ್ಟ್ರಗಳ ೪೪ ನೌಕಾ ಸಿಬ್ಬಂದಿಯನ್ನು ಹೊತ್ತು ಬಂದರು ತಲುಪಿದೆ. ಮಿತ್ರ ರಾಷ್ಟ್ರಗಳಲ್ಲಿ ಕೊಮೊರೋಸ್, ಕೀನ್ಯಾ, ಮಡಗಾಸ್ಕರ್, ಮಾಲ್ಡೀವ್ಸ್, ಮಾರಿಷಸ್, ಮೊಝಾಂಬಿಕ್, ಸಿಶೆಲ್ಸ್, ಶ್ರೀಲಂಕಾ ಮತ್ತು ದಕ್ಷಿಣ ಆಫ್ರಿಕಾ ಸೇರಿವೆ.

ಬಂದರು ಭೇಟಿಯ ಸಮಯದಲ್ಲಿ ನೌಕಾ ಸಿಬ್ಬಂದಿ, ಆಫ್ರಿಕಾ-ಭಾರತ ನಿರ್ಣಾಯಕ ಕಡಲ ಕಾರ್ಯಾಚರಣೆ ಐಕೀಮ್ ನೌಕಾ ಸಮರಾಭ್ಯಾಸದಲ್ಲಿ ತೊಡಗಲಿದ್ದಾರೆ. ಇಂದಿನಿಂದ ಆರಂಭವಾಗಲಿರುವ ಈ ಸಮರಾಭ್ಯಾಸಕ್ಕೆ ಕೇಂದ್ರ ರಕ್ಷಣಾ ಖಾತೆ ರಾಜ್ಯ ಸಚಿವ ಸಂಜಯ್ ಸೇಠ್ ಚಾಲನೆ ನೀಡಲಿದ್ದಾರೆ. ಆರು ದಿನಗಳ ಈ ಸಮರಾಭ್ಯಾಸ ಇದೇ ೧೮ ರಂದು ಸಂಪನ್ನಗೊಳ್ಳಲಿದ್ದು, ಅದು ಮಿತ್ರ ರಾಷ್ಟ್ರಗಳೊಂದಿಗೆ ಕಡಲ ಭದ್ರತೆ ಮತ್ತು ಸಹಕಾರ ಹೆಚ್ಚಿಸುವ ಗುರಿ ಹೊಂದಿದೆ. ಸಮರಾಭ್ಯಾಸದ ಮುಂದಿನ ಭಾಗವಾಗಿ ಇದೇ ೧೫ ರಂದು ದಾರ್-ಎಸ್-ಸಲಾಂ ನಿಂದ ಮೊಝಾಂಬಿಕ್‌ನ ನಕಲಾ ಬಂದರಿಗೆ ಐಎನ್‌ಎಸ್ ಸುನೈನಾ ತೆರಳಲಿದೆ.

******************

ಸುಡಾನ್‌ನ ಉತ್ತರ ಡಾರ್ಫರ್‌ನ ರಾಜಧಾನಿ ಎಲ್ ಫಾಶರ್‌ನಲ್ಲಿರುವ ಎರಡು ಶಿಬಿರಗಳ ಮೇಲೆ ಅರೆ ಸೇನಾ ಕ್ಷಿಪ್ರ ಬೆಂಬಲ ಪಡೆ- ಆರ್‌ಎಸ್‌ಎಫ್ ನಡೆಸಿದ ದಾಳಿಯಲ್ಲಿ ಕಳೆದ ೪೮ ಗಂಟೆಗಳಲ್ಲಿ ೧೧೪ ಮಂದಿ ನಾಗರಿಕರು ಮೃತಪಟ್ಟಿದ್ದಾರೆ.

******************

ಇಂಡಿಯನ್ ಪ್ರೀಮಿಯರ್ ಲೀಗ್- ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯಲ್ಲಿಂದು ಎರಡು ಪಂದ್ಯಗಳು ನಡೆಯಲಿದ್ದು, ರಾಜಸ್ಥಾನದಲ್ಲಿ ನಡೆಯಲಿರುವ ಮೊದಲ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ರಾಜಸ್ಥಾನ ರಾಯಲ್ಸ್ ಮುಖಾಮುಖಿಯಾಗಲಿವೆ. ಪಂದ್ಯ ಮಧ್ಯಾಹ್ನ ೩.೩೦ ಕ್ಕೆ ಆರಂಭವಾಗಲಿದೆ.

ದೆಹಲಿಯಲ್ಲಿ ನಡೆಯಲಿರುವ ದಿನದ ಎರಡನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಮುಂಬೈ ಇಂಡಿಯನ್ಸ್ ತಂಡಗಳು ಸೆಣಸಲಿದ್ದು, ಈ ಪಂದ್ಯ ರಾತ್ರಿ ೭.೩೦ ಕ್ಕೆ ಪ್ರಾರಂಭವಾಗಲಿದೆ.

******************

ಪಶ್ಚಿಮ ಬಂಗಾಳದಲ್ಲಿ ನಿನ್ನೆ ನಡೆದ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ತಂಡವನ್ನು ಮೋಹನ್ ಬಗಾನ್ ತಂಡ ೨-೦ ಗೋಲುಗಳ ಅಂತರದಲ್ಲಿ ಮಣಿಸಿ, ಐಎಸ್‌ಎಲ್ ಟ್ರೋಫಿ ತನ್ನದಾಗಿಸಿಕೊಂಡಿದೆ.

*********ಮುಕ್ತಾಯ*********